# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 09/2022

ಎಂ. ಡಬ್ಲ್ಯೂ- 1

**<u>ದಿನಾಂಕ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ ಎಲ್.ಎಂ.ಪಿ. ವಕೀಲರಿಂದಃ**

ನಾನು 2 ನೇ ಪಕ್ಷಗಾರರ ಸಂಸ್ಥೆಯಲ್ಲಿ 3 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. 2 ನೇ ಪಕ್ಷಗಾರ ಸಂಸ್ಥೆ ಸುಮಾರು 25 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದೆ ಎನ್ನುವುದರ ಬಗ್ಗೆ ನನಗೆ ಅರಿವು ಇರುತ್ತದೆ. ಸದರಿ ಸಂಸ್ಥೆ ಸುಮಾರು 25 ಎಕರೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. 2 ನೇ ಪಕ್ಷಗಾರ ಸಂಸ್ಥೆ ದೊಡ್ಡ ಕೈಗಾರಿಕೆ ಎಂದರೆ ಸರಿಯಲ್ಲ. ಸದರಿ ಸಂಸ್ಥೆ ದೊಡ್ಡ ಕೈಗಾರಿಕೆ ಆಗಿರುವ ಕಾರಣ ಕಾರ್ಖಾನೆ ಕಾಯ್ದೆ ಅಡಿಯಲ್ಲಿ ಪರವಾನಿಗೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. 2020 ಕ್ಕಿಂತ ಮುಂಚೆ ಈ ಕಾರ್ಖಾನೆಯಲ್ಲಿ ಸುಮಾರು 200 ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸಾಕ್ಷಿ ದಾಖಲೆಗಳ ಪ್ರಕಾರ ನನಗೆ ತಿಳಿದಿರುತ್ತದೆ ಎನ್ನುತ್ತಾರೆ. ಕಾರ್ಖಾನೆ ಲಾಭಕಾರವಾಗಿ ನಡೆಯುತ್ತಿತ್ತು ಹಾಗೂ ಅದಕ್ಕೆ ಬಾಹ್ಯ ಸಾಲಗಳು ಯಾವುದು ಇರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನಮ್ಮ ಸಂಸ್ಥೆಯಲ್ಲಿ Zenith Employees Association ಎಂಬ ಒಂದೇ ಕಾರ್ಮಿಕ ಸಂಘ ಇರುತ್ತದೆ ಎಂದರೆ ಸರಿ. ಸದರಿ ಸಂಘಕ್ಕೆ ನಾವು ಮಾನ್ಯತೆ ನೀಡಿರುತ್ತೇವೆ ಎಂದರೆ ಸರಿ. 2018 ರಲ್ಲಿ ನಮ್ಮ ಸಂಸ್ಥೆಯಲ್ಲಿ 200 ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿರುವ ಕಾರಣ ಅವರುಗಳನ್ನು ಲೇಆಫ ಮಾಡಬೇಕು ಎಂದು ಸೂಕ್ತ ಪ್ರಾಧಿಕಾರದ ಮುಂದೆ ಅನುಮತಿ ಗಾಗಿ ಅರ್ಜಿ ಸಲ್ಲಿಸಿದ್ದ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ದಾಖಲೆಗಳ ಪ್ರಕಾರ ನನಗೆ ತಿಳಿದಿರುತ್ತದೆ. ಸದರಿ ಅರ್ಜಿಯನ್ನು ಸೂಕ್ತ ಪ್ರಾಧಿಕಾರದವರು ತಿರಸ್ಕಾರ ಮಾಡಿರುತ್ತಾರೆ ಎಂದರೆ ಸರಿ. ಸದರಿ ತಿರಸ್ಕಾರದ ವಿರುದ್ಧ ನಾವು ಯಾವುದೇ ಮೇಲ್ಮನವಿ ಮಾಡಿಲ್ಲ.

ನಂತರ ಸುಮಾರು 120 ಜನ ಕಾರ್ಮಿಕರನ್ನು ರಿಟ್ರೆಂಚ್ ಮಾಡಬೇಕು ಎಂದು ಸೂಕ್ತ ಪ್ರಾಧಿಕಾರದ ಮುಂದೆ ಅನುಮತಿ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿದ್ದೆವು ಎಂದರೆ ನನಗೆ ಗೊತ್ತಿಲ್ಲ. ಸದರಿ ರಿಟ್ರೆಂಚ್ ಮೆಂಟ್ ಅರ್ಜಿ ತಿರಸ್ಕಾರಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ತಿರಸ್ಕಾರಗೊಂಡ ಮೇಲೆ Voluntary Retirement Scheme (VRS) ಪ್ರಕಟಣೆ ಮಾಡಿದ್ದ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ನನಗೆ ದಾಖಲೆಗಳ ಪ್ರಕಾರ ಇರುತ್ತದೆ. ಸದರಿ VRS ನ ಅಡಿಯಲ್ಲಿ 92 ಜನ ಕಾರ್ಮಿಕರು ಸ್ವಯಂ ನಿವೃತ್ತಿ ಪಡೆದಿರುತ್ತಾರೆ. ಅಷ್ಟು ಜನ ಸ್ವಯಂ ನಿವೃತ್ತಿ ಪಡೆದಿದ್ದರೂ ಕೂಡ ಉತ್ಪಾದನೆ ಕಡಿಮೆ ಆಗಿರಲಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ಸದರಿ 92 ಜನ ಸ್ವಯಂ ನಿವೃತ್ತಿ ಪಡೆದ ನಂತರ ಹೊಸದಾಗಿ ಕಾರ್ಮಿಕರನ್ನು ನಾವು ನೇಮಕ ಮಾಡಿಕೊಂಡಿರುವುದಿಲ್ಲ. ನಮ್ಮ ಸಂಸ್ಥೆಯಲ್ಲಿ ವಿದೇಶಿ ಮಾರುಕಟ್ಟೆಗೆ ಕೊಡುವ ವಸ್ತುಗಳಲ್ಲದೇ ದೇಶಿಯ ಮಾರುಕಟ್ಟೆಗೆ ಬೇಕಾಗುವ ವಸ್ತುಗಳನ್ನು ಕೂಡ ತಯಾರು ಮಾಡುತ್ತೇವೆ ಎಂದರೆ ಬರೀ ವಿದೇಶಿ ವಸ್ತುಗಳನ್ನು ಮಾತ್ರ ನಮ್ಮ ಕಂಪನಿಯಲ್ಲಿ ತಯಾರು ಮಾಡುತ್ತಾರೆ ಎನ್ನುತ್ತಾರೆ. ಜೂನ್-2020 ರಿಂದ ಬಂದಿರುವ ಆದೇಶಗಳನ್ನು ತಯಾರು ಮಾಡಲು ಆಗದೇ ಇದ್ದ ಕಾರಣ ಬೇರೆ ಬೇರೆ ಕಾರ್ಖಾನೆಗಳಿಗೆ ಕಚ್ಚಾ ವಸ್ತುಗಳನ್ನು ಕೊಟ್ಟು ತಯಾರು ಮಾಡಿ ಮಾರುಕಟ್ಟೆಗೆ ಕಳುಹಿಸಿತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಪ್ರಶ್ನಿಸಿ ಕಾರ್ಮಿಕ ಸಂಘದ ವತಿಯಿಂದ ದೂರನ್ನು ಮಾಡಿದ್ದರು ಎಂದರೆ ಸರಿಯಲ್ಲ. ಸೂಕ್ತ ಪ್ರಾಧಿಕಾರಕ್ಕೆ ದೂರನ್ನು ಸಲ್ಲಿಸುವ ಮುಂಚೆ ಆಡಳಿತ ವರ್ಗಕ್ಕೆ ಈ ರೀತಿ ಒಂದು ಪತ್ರವನ್ನು ಬರೆದಿದ್ದರು ಎಂದರೆ ಸರಿಯಲ್ಲ. ದಿನಾಂಕ 07.07.2020 ರಂದು ಕಾರ್ಖಾನೆ ಲೇಆಫ ಆಗಿದ್ದ ಬಗ್ಗೆ ನನಗೆ ಅರಿವು ಇರುತ್ತದೆ. ಆ ಸಂದರ್ಭದಲ್ಲಿ ಕಾರ್ಖಾನೆಯಲ್ಲಿ 100 ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಲೇಆಫ ಮಾಡುವ ಮುಂಚೆ ಸೂಕ್ತ ಪ್ರಾಧಿಕಾರದ ಮುಂದೆ ಅನುಮತಿ ಅರ್ಜಿ ಸಲ್ಲಿಸಿದ್ದರಾ ಎಂದರೆ ನನಗೆ ಗೊತ್ತಿಲ್ಲ. ಲೇಆಫ ಮಾಡುವುದಕ್ಕೆ ಮುಂಚೆ ಬೇರೆ ಕಾರ್ಖಾನೆಯಲ್ಲಿ

ಕಚ್ಚಾ ವಸ್ತುಗಳನ್ನು ನೀಡಿ ತಯಾರು ಮಾಡಿಸಿದ್ದರಿಂದ ಇಲ್ಲಿರುವ ಕಾರ್ಮಿಕರಿಗೆ ಲೇಆಫ ಕೊಟ್ಟಿದ್ದೀರಿ ಎಂದರೆ ದಾಖಲೆಗಳ ಪ್ರಕಾರ ಆ ರೀತಿ ನಡೆದಿರುವುದಿಲ್ಲ ಎನ್ನುತ್ತಾರೆ.

ಸದರಿ ಲೇಆಫ ಮಾಡಿರುವುದರ ವಿರುದ್ಧ ಕಾರ್ಮಿಕ ಸಂಘದವರು ಅದನ್ನು ಪ್ರಶ್ನಿಸಿ ದೂರು ಮಾಡಿರುವುದರ ಬಗ್ಗೆ ನನಗೆ ಅರಿವು ಇರುತ್ತದೆ. ಲೇಆಫಗೆ ಸಂಬಂಧ ಪಟ್ಟಂತೆ ಕೈಗಾರಿಕಾ ವಿವಾದಗಳು ಎತ್ತಿರುವುದು ನನಗೆ ಗೊತ್ತಿರುತ್ತದೆ ಎಂದರೆ ಸರಿ. ರಾಜ್ಯ ಕಾರ್ಮಿಕ ಆಯುಕ್ತರು ನಾವು ಲೇಆಫ ಕ್ರಮಗಳನ್ನು ಉಲ್ಲಂಘನೆ ಮಾಡಿದ್ದೇವೆ ಎಂದು ವರದಿ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲೇಆಫಗೆ ಸಂಬಂಧಪಟ್ಟ ವಿವಾದದಲ್ಲಿ ಆಡಳಿತ ವರ್ಗ ಸರಿಯಾಗಿ ಭಾಗವಹಿಸು ತ್ತಿರಲಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಲೇಆಫ ವಿವಾದ ಇರುವ ಸಮಯದಲ್ಲಿ ಕಾರ್ಖಾನೆಯಲ್ಲಿ ಸಿನಿಯಾರಿಟಿ ಲಿಸ್ಟನ್ನು ಪ್ರಕಟಣೆ ಮಾಡಿದ್ದೆವು ಎಂದರೆ ಸಾಕ್ಷಿ ದಾಖಲೆಗಳಲ್ಲಿ ಇರುತ್ತದೆ ಎನ್ನುತ್ತಾರೆ. ಸದರಿ ಸಿನಿಯಾರಿಟಿ ಲಿಸ್ಟನ್ನು ಪ್ರಶ್ನೆ ಮಾಡಿ ಕಾರ್ಮಿಕ ಸಂಘದವರು ವಿವಾದ ಎತ್ತಿರುವ ಬಗ್ಗೆ ನನಗೆ ಅರಿವು ಇರುತ್ತದೆ. ಈ ಸಂಬಂಧ ಸಹಾಯಕ ಕಾರ್ಮಿಕ ಆಯುಕ್ತರು ಕಾರ್ಖಾನೆಗೆ ಒಂದು ನೊಟೀಸ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ನೊಟೀಸಿನ ಪ್ರಕಾರ ದಿನಾಂಕ 18.02.2020 ರಂದು ಸಂಧಾನ ಸಭೆ ಇರುತ್ತದೆ ಎಂದು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಂಧಾನ ಸಭೆ ನಡೆಯಬೇಕಾಗಿದ್ದ ದಿನಾಂಕದಂದು ನಾವು ಸುಮಾರು 42 ಜನ ಕಾರ್ಮಿಕರನ್ನು ರಿಟ್ರೆಂಚ್ ಮಾಡಿದ್ದೆವು ಎಂದರೆ ಅದು ಕಡತದಲ್ಲಿ ಇರುತ್ತದೆ ಎನ್ನುತ್ತಾರೆ.

ಸಿನಿಯಾರಿಟಿ ಪಟ್ಟಿಯನ್ನು ಹಾಕಿದ ಸಮಯದಲ್ಲಿ ಕಾರ್ಖಾನೆಯಲ್ಲಿ 100 ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದರೆ ಅದನ್ನು ನಾನು ನೋಡಿಲ್ಲ ಎನ್ನುತ್ತಾರೆ. ನಾವು ಕಾರ್ಮಿಕರನ್ನು ರಿಟ್ರೆಂಚ್ ಮಾಡಿ ಆದ ಮೇಲೆ ಕಾರ್ಮಿಕರ ಸಂಖ್ಯೆ ಸುಮಾರು 80 ಇತ್ತು ಎಂದರೆ ಸರಿ. ಸದರಿ 42 ಜನ ಕಾರ್ಮಿಕರನ್ನು ರಿಟ್ರೆಂಚ್ ಮಾಡಬೇಕು ಎಂದು ಯಾವುದೇ ಪ್ರಾಧಿಕಾರದ ಅನುಮತಿ ಪಡೆದುಕೊಂಡಿಲ್ಲ ಎಂದರೆ ನಾನು ನೋಡಿಲ್ಲ. 100 ಕ್ಕೂ ಹೆಚ್ಚು ಕಾರ್ಮಿಕರ ಇದ್ದಲ್ಲಿ ಸಮಯದಲ್ಲಿ ರಿಟ್ರೆಂಚ್ ಮಾಡಬೇಕಾದರೆ ಅನುಮತಿ ಪಡೆದುಕೊಳ್ಳುವ ಅಗತ್ಯ ಇತ್ತು ಎಂದರೆ

ನನಗೆ ಅದರ ಬಗ್ಗೆ ಅರಿವು ಇರುತ್ತದೆ ಆದರೆ ಅವತ್ತು ನಾನು ಅಲ್ಲಿ ಇರಲಿಲ್ಲ ಎನ್ನುತ್ತಾರೆ. ಲೇಆಫ ಮಾಡಿದ್ದ ಸಂದರ್ಭದಲ್ಲಿ ಹಾಗೂ 42 ಜನ ಕಾರ್ಮಿಕರನ್ನು ಗಿಟ್ರೆಂಚ್ ಮಾಡಿದ್ದ ಸಮಯದಲ್ಲಿ ಕೊವೀಡ್ ಅವಧಿ ಜಾರಿಯಲ್ಲಿತ್ತು ಎಂದರೆ ಸರಿ. ಸದರಿ ಅವಧಿಯಲ್ಲಿ ಕಾರ್ಮಿಕರನ್ನು ಕೆಲಸದಿಂದ ತೆಗೆಯಬಾರದು ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರ ಪ್ರಕಟಣೆ ಹೊರಡಿಸಿದ್ದ ಬಗ್ಗೆ ನನಗೆ ಅರಿವು ಇರುತ್ತದೆ.

(ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**